# ಸ್ಮಾರ್ಟ್‌ಫೋನ್ ಇದೆ, ಎಚ್ಚರ!



ಪೋಷಕರು ಸ್ವತಃ ತಾವೇ ಟೀವಿ ಮತ್ತು ಸ್ಮಾರ್ಟ್‌ಫೋನ್‌ಗಳ ದಾಸರಾಗಿಬಿಟ್ಟರೆ ಬೆಳೆಯುವ ಮಕ್ಕಳನ್ನು ಸರಿದಾರಿಯಲ್ಲಿ ಮುನ್ನಡೆಸುವವರು ಯಾರು?

■ ಮಂಜುನಾಥ ಸು.ಮ.

ನಾವು ಪೋಷಕರು ಯಾವುದೇ ಮಾಹಿತಿಗಾಗಿ ಮಗುವಿಗೆ ಗೂಗಲ್ ಮಾಸ್ಟರ್‌ನ ಸಹಾಯ ಪಡೆಯಲು ಹೇಳುತ್ತೇವೆ. ಪುಸ್ತಕ ಓದಲು ಪ್ರೇರೇಪಿಸುವುದಿಲ್ಲ. ಖಂಡಿತ ತಪ್ಪಲ್ಲ. ಆದರೆ ಗೂಗಲ್ ನೆರವು ಕೇವಲ ತುರ್ತು ಸಂದರ್ಭಗಳಿಗೆ ಮಾತ್ರ ಸೂಕ್ತ ಎಂಬುದನ್ನು ನಮಗೆ ಮನದಟ್ಟಾಗಿಲ್ಲ. ಇದನ್ನು ಮಕ್ಕಳ ಅರಿವಿಗೆ ತರುವಲ್ಲಿಯೂ ವಿಫಲರಾಗುತ್ತಿದ್ದೇವೆ.

ಪುಸ್ತಕ ಓದುವಾಗ ಅನೇಕ ವಿಷಯಗಳು ಒಂದು ಕೊಂಡಿಯಂತೆ ಲಭ್ಯವಾಗುತ್ತವೆ. ಆದರೆ ಅಂತರ್ಜಾಲದಲ್ಲಿ ಕೇವಲ ಉತ್ತರ ಮಾತ್ರ ಸಿಗುತ್ತದೆ. ಅದು ನಮ್ಮನ್ನು ಓದಿಸಿಕೊಂಡು ಹೋಗಲಾರದು.

ಇನ್ನು ಈ ಸ್ಮಾರ್ಟ್ ಫೋನ್ ಎಂಬ ಪೆಡಂಭೂತ ನಮ್ಮ ಈಗಿನ ವಿದ್ಯಾರ್ಥಿಗಳ ಕಲಿಕೆಗೆ ಹೇಗೆ ಮಾರಕ ಎಂಬುದರ ವಿಶ್ಲೇಷಣೆ ಮಾಡೋಣ. ಕಾಲೇಜಿಗೆ ಸೇರುವ ಶೇಕಡಾ 80ರಷ್ಟು ವಿದ್ಯಾರ್ಥಿಗಳು ಇಂದು ಸ್ಮಾರ್ಟ್ ಫೋನ್ ದಾಸರಾಗುತ್ತಿದ್ದಾರೆ. ಅದರಲ್ಲಿ ಸಿಗುವ ಚಿತ್ರ ವಿಚಿತ್ರ ಮಾಹಿತಿಗಳಿಂದ ಅದನ್ನು ಬಿಟ್ಟಿರಲಾರದ ಪರಿಸ್ಥಿತಿಗೆ ಬಂದು ತಲುಪಿದೆ ನಮ್ಮ ಯುವ ಸಮುದಾಯ. 'ಸ್ಮಾರ್ಟ್ ಫೋನ್ ಇಲ್ಲದವನನ್ನು ಏನೂ ಕೆಲಸಕ್ಕೆ ಬಾರದವನು. ಪುಕ್ಕಲ, ತಂದೆ ತಾಯಿಗೆ ಹೆದರುವ ಹೇಡಿ' ಎಂದು ಹೀಗೆಳೆಯುವ ಸಂಸ್ಕೃತಿ ಕೂಡಾ ಮಕ್ಕಳ ನಡುವೆ ವ್ಯಾಪಕವಾಗಿ ಹರಡುತ್ತಿದೆ.

ವಾಟ್ಸಾಪ್, ಫೇಸ್ಬುಕ್, ಹೈಕ್ ಹೀಗೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸುದ್ದಿಗಳಲ್ಲಿ ಸುಳ್ಳು ಯಾವುದು, ಸತ್ಯ ಯಾವುದು ಎನ್ನುವುದು ಸ್ಪಷ್ಟ ಇರುವುದಿಲ್ಲ. ಅನೇಕ ಸುಳ್ಳುಸುದ್ದಿಗಳನ್ನು ನಿಜವೆಂದು ನಂಬಿ ಅವುಗಳನ್ನು ವೀಕ್ಷಿಸುವದರಲ್ಲಿ ಅಥವಾ ಯಾವುದೋ ಒಂದು ಗುಂಪಿನ ಪ್ರಚೋದನೆಗೆ ಒಳಗಾಗಿ ಸಮಾಜ ವಿರೋಧಿ ಚಟುವಟಿಕೆ ನಡೆಸಲು ಮುಂದಾಗುತ್ತಿರುವ ಯುವ ಸಮುದಾಯ ಕೂಡಾ ಇವತ್ತು ನಮ್ಮ ಮುಂದಿದೆ.

ನಾವು ಚಿಕ್ಕವರಿದ್ದಾಗ ನಾವು ಓದಲು ಕುಳಿತರೆ, ನಮ್ಮ ತಂದೆಯೋ, ಅಣ್ಣನೋ, ಅಕ್ಕನೋ, ಚಿಕ್ಕಪ್ಪನೋ – ಹೀಗೆ ಯಾರೋ ಒಬ್ಬರು ನಮ್ಮ ಪಕ್ಕದಲ್ಲಿ ಕೂತು ನಾವು ಓದುವುದನ್ನು ಬೆರಗುಗಣ್ಣುಗಳಿಂದ ನೋಡುತ್ತಿದ್ದರು. ಮನೆಗೆ ಬಂದ ಅತಿಥಿಗಳು, ಸ್ನೇಹಿತರು ಮುಂತಾದವರಿಗೆ ನಾವು ಓದುವುದನ್ನು ಪರಿಪರಿಯಾಗಿ ವಿವರಿಸಿ ಹೆಮ್ಮೆಯಿಂದ ಬೀಗುತ್ತಿದ್ದರು. ಯಾವುದೇ ಅಂಕಗಳ ಗೋಜಿಲ್ಲದೆ ಕನ್ನಡ ಮತ್ತು ಮಗ್ಗಿಯನ್ನು ಜೋರಾಗಿ ಓದಿ ಹೇಳಿದರೆ ಸಾಕು, ಅವರಿಗೆ ಖುಷಿಯಾಗುತ್ತಿತ್ತು. ಮುಖ್ಯವಾಗಿ ಅವರು ನಮ್ಮ ಪಕ್ಕದಲ್ಲಿಯೇ ಕೂರುತ್ತಿದ್ದರು. ಏಕೆಂದರೆ ಅವರಿಗೆ ಟಿ.ವಿ, ರೇಡಿಯೋ ಗಿಂತ ಪ್ರಮುಖವಾದುದು ಮಕ್ಕಳಿಗೆ ಕಲಿಸಬೇಕಾದ ಮೌಲ್ಯಗಳು. ಅದಕ್ಕೆಂದೇ ಅವರು ರಾಮಾಯಣ, ಮಹಾಭಾರತ ಹಾಗೂ ಅನೇಕ ಜಾನಪದ ಕಥೆಗಳನ್ನು ಹೇಳುತ್ತಿದ್ದರು. ಮಕ್ಕಳ ಮನಸ್ಸು ವಿಕಸಿಸುವಂತೆ ಮಾಡುತ್ತಿದ್ದರು.

ಆದರೆ, ಈಗಿನ ಪರಿಸ್ಥಿತಿಯನ್ನು ಒಮ್ಮೆ ಅವಲೋಕಿಸಿ ನೋಡಿದಾಗ ಎಲ್ಲವೂ ತದ್ವಿರುದ್ಧ. ಮಗು ಹೆಣಭಾರದ ಪಾಟೀಚೀಲವನ್ನು ಹೆಗಲಿಗೇರಿಸಿಕೊಂಡು ಮನೆಗೆ ಬರುವಷ್ಟರಲ್ಲಿ ಮನೆಯಲ್ಲಿ ತಂದೆ ತಾಯಿ ಇಬ್ಬರೂ ಇರುವುದಿಲ್ಲ. ಏಕೆಂದರೆ ಬಹುತೇಕ ಕುಟುಂಬಗಳಲ್ಲಿ ಸಂಸಾರ ಸಾಗಬೇಕೆಂದರೆ ಗಂಡು ಹೆಂಡತಿ ಇಬ್ಬರೂ ದುಡಿಯಬೇಕು. ನಮ್ಮ ಕಾಲದಲ್ಲಿ ಮಗು ಶಾಲೆ ಬಿಟ್ಟು ಬಂದಾಗ ಹೆತ್ತವರನ್ನು ಹುಡುಕಿಕೊಂಡು ಹೊಲ, ಗದ್ದೆಗೆ ಓಡುತ್ತಿತ್ತು. ಈಗ ಎಲ್ಲಿಗೆ ಎಂದು ಓಡುವುದು? ಒಂದು ವೇಳೆ ತಾಯಿ ಗೃಹಿಣಿಯಾಗಿ ಮನೆಯಲ್ಲೇ ಇರುವುದಾದರೆ, ಆ ಮಗುವಿಗೆ ಅತಿಯಾದ ಮುತುವರ್ಜಿಯಿಂದ ತಿನ್ನಲು ಸ್ನ್ಯಾಕ್ಸ್ ನೀಡಿ ಮತ್ತೊಂದು ಚೀಲ ಹೆಗಲಿಗೇರಿಸಿ ಟ್ಯೂಷನ್ ಕಡೆಗೆ ಓಡಿಸಿಕೊಂಡು ಹೋಗಿ ಅಲ್ಲಿ ತಳ್ಳಿ ಬರುತ್ತಾಳೆ. ಮನೆಯಲ್ಲಿ ತನಗೆ ಪ್ರಿಯವಾದ ಧಾರವಾಹಿ ನೋಡುವುದೋ ಅಥವಾ ಫೋನ್‌ನಲ್ಲಿ ಗೆಳತಿಯರ ಜತೆಗೆ ಹರಟೆ ಹೊಡೆಯಲು ಪ್ರಾರಂಭಿಸುತ್ತಾಳೆ.

ಟ್ಯೂಷನ್ ಮುಗಿಸಿದ ಮಗು ಮನೆಗೆ ಬಂದಾಗ ಅಪ್ಪ ಮತ್ತು ಅಮ್ಮ ಇಬ್ಬರೂ ಅವರವರ ಸ್ಮಾರ್ಟ್ ಫೋನ್‌ನಲ್ಲಿ ಫೇಸ್ ಬುಕ್, ವಾಟ್ಸಾಪ್‌ನಲ್ಲಿ ಬಂದಂತಹ ಸಂದೇಶಗಳನ್ನು ಓದುತ್ತಾ ತಮ್ಮ ಪಾಡಿಗೆ ತಾವು ನಗುತ್ತಿದ್ದರೆ, ಮಗು ಕೂಡಾ ಅವರಿಬ್ಬರಲ್ಲಿ ಯಾರೋ ಒಬ್ಬರನ್ನು ಆರಿಸಿಕೊಂಡು ತಾನೂ ಮೊಬೈಲ್ ನೋಡುವುದರಲ್ಲಿ ಮಗ್ನವಾಗುತ್ತದೆ. ಕೆಲವೊಮ್ಮೆ ಈ ಪಾಲಕರಿಗೆ ಕರ್ತವ್ಯಪ್ರಜ್ಞೆ ಅರಿವಿಗೆ ಬಂದು ಮಗುವನ್ನು ಗದರಿಸಿ ಕೊಠಡಿಯಲ್ಲಿ ಕೂಡಲು ಹೇಳಿ ಮತ್ತೆ ಓದುವುದಕ್ಕೆ ಹಚ್ಚುತ್ತಾರೆ. ಅಂದೇನಾದರೂ ಆ ಮಗು ತನ್ನ ಪ್ರಗತಿ